# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 286 |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 06.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಕ್ಸಲ್ ಚಟುವಟಿಕೆ ಸಂಪೂರ್ಣವಾಗಿ ನಿಂತಿದೆಯೇ; (ವಿವರ ನೀಡುವುದು) | 2024ನೇ ಸಾಲಿನ ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ಕರ್ನಾಟಕ ರಾಜ್ಯದ ವಿಕ್ರಂಗೌಡ, ಮುಂಡಗಾರು ಲತಾ, ಸುಂದರಿ, ಜಯಣ್ಣ, ವನಜಾಕ್ಷಿ, ಕೋಟೆಹೊಂಡ ರವೀಂದ್ರ, ಕೇರಳ ರಾಜ್ಯದ ಟಿ.ಎನ್ ಜಿಶಾ ಮತ್ತು ತಮಿಳುನಾಡು ರಾಜ್ಯದ ಕೆ.ವಸಂತ ಹಾಗೂ ಸಂತೋಷ್ ಎಂಬ ನಕ್ಸಲರ ಚಲನವಲನಗಳು ಕರ್ನಾಟಕ ರಾಜ್ಯದ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಕಂಡುಬಂದಿದ್ದು, ಈ ಸಂಬಂಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ.<br><br>ದಿನಾಂಕ: 18/11/2024 ರಂದು ಉಡುಪಿ ಜಿಲ್ಲೆಯ ಹೆಬ್ರಿ ಪೊಲೀಸ್ ಠಾಣಾ ವ್ಯಾಪ್ತಿಯ ಪೀತಬೈಲು ಅರಣ್ಯ ಪ್ರದೇಶದಲ್ಲಿ ಎಎನ್ಎಫ್ ಪೊಲೀಸರು ಮತ್ತು ನಕ್ಸಲರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಕರ್ನಾಟಕ ರಾಜ್ಯದ ನಕ್ಸಲ್ ನಾಯಕ ವಿಕ್ರಂಗೌಡ ಎಂಬುವವರು ಮೃತಪಟ್ಟಿರುತ್ತಾರೆ.<br><br>ದಿನಾಂಕ: 08/01/2025 ರಂದು ಕರ್ನಾಟಕ ರಾಜ್ಯದ ಮುಂಡಗಾರು ಲತಾ, ಸುಂದರಿ, ಜಯಣ್ಣ ಮತು್ತ ವನಜಾಕ್ಷಿ ಕೇರಳ ರಾಜ್ಯದ ಟಿ.ಎನ್ ಜಿಶಾ ಮತ್ತು ತಮಿಳುನಾಡು ರಾಜ್ಯದ ಕೆ.ವಸಂತ ಸೇರಿದಂತೆ ಒಟ್ಟು 6 ಜನ ನಕ್ಸಲರು ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಯೋಜನೆಯ ರಾಜ್ಯ ಸಮಿತಿಯ ಮುಂದೆ ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ರಾಜ್ಯ ರವರ ಸಮ್ಮುಖದಲ್ಲಿ ಶರಣಾಗತರಾಗಿರುತ್ತಾರೆ.<br><br>ದಿನಾಂಕ: 01/02/2025 ರಂದು ಕರ್ನಾಟಕ ರಾಜ್ಯದ ಭೂಗತ ನಕ್ಸಲ್ ಕೋಟೆಹೊಂಡ ರವೀಂದ್ರ ಈತನು ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಜಿಲ್ಲಾ ಸಮಿತಿ, ಚಿಕ್ಕಮಗಳೂರು ಜಿಲ್ಲೆ ಇವರ ಮುಂದೆ ಶರಣಾಗತರಾಗಿರುತ್ತಾರೆ.<br><br>ದಿನಾಂಕ: 02/02/2025 ರಂದು ಭೂಗತ ನಕ್ಸಲಳಾದ ತೊಂಬೊಟ್ಟು ಲಕ್ಷ್ಮೀ ಈಕೆಯು ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಜಿಲ್ಲಾ ಸಮಿತಿ, ಉಡುಪಿ ಜಿಲ್ಲೆ ಇವರ ಮುಂದೆ ಶರಣಾಗತರಾಗಿರುತ್ತಾರೆ.<br><br>ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಸಕ್ರೀಯವಾಗಿ ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದವರಲ್ಲಿ ಕೆಲವರು ಎನ್‌ಕೌಂಟರ್‌ನಲ್ಲಿ ಹತರಾಗಿದ್ದು, ಉಳಿದವರು ದಸ್ತಗಿರಿ ಮತ್ತು ಶರಣಾಗತರಾಗಿರುತ್ತಾರೆ.<br><br>ಪ್ರಸ್ತುತ ಪರಪ್ಪನ ಅಗ್ರಹಾರ ಕೇಂದ್ರ ಕಾರಗೃಹ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯದ ನಕ್ಸಲರುಗಳಾದ ರಮೇಶ್, ಕೋಟೆ ಶೀನ, ಪರಗಿರಾಜನ್, |

| | | |
|---|---|---|
| | | ಬೋಯ ಆಂಜನೇಯಲು, ಬೋಯ ಅಂಕೀರಾಯ, ಬೋಯ ಒಬಳೇಶ್, ಎಂ ನಾಗರಾಜು ರವರುಗಳು ವಿಚಾರಣಾಧೀನ ಬಂಧಿಗಳಾಗಿರುತ್ತಾರೆ.<br><br>ಕೇರಳ ರಾಜ್ಯದ ತ್ರಿಶೂರ್ ಜಿಲ್ಲೆಯ ವಿಯ್ಯುರೂ ಸೆಂಟ್ರಲ್ ಕಾರಗೃಹದಲ್ಲಿ ಕರ್ನಾಟಕ ರಾಜ್ಯದ ನಕ್ಸಲರಾದ ಬಿ.ಜಿ.ಕೃಷ್ಣಮೂರ್ತಿ, ಸಾವಿತ್ರಿ, ಶ್ರೀಮತಿ, ಸುರೇಶ ರವರುಗಳು ವಿಚಾರಣಾಧೀನ ಬಂಧಿಗಳಾಗಿರುತ್ತಾರೆ.<br>ತಮಿಳುನಾಡು ರಾಜ್ಯದ ಕೋಯಂಬತ್ತೂರು ಕೇಂದ್ರ ಕಾರಗೃಹದಲ್ಲಿ ಕರ್ನಾಟಕ ರಾಜ್ಯದ ನಕ್ಸಲ್ ಮೇಲ್ಲಂಕ ಶೋಭರವರು ವಿಚಾರಣಾಧೀನ ಬಂಧಿಯಾಗಿರುತ್ತಾರೆ. |
| ಆ) | ನಕ್ಸಲ್ ಚಟುವಟಿಕೆಯನ್ನು ದಮನಗೊಳಿಸಲು ಕಾರ್ಯನಿರ್ವಹಿಸುತ್ತಿದ್ದ ಎ.ಎನ್.ಎಫ್. ಕಾರ್ಯಪಡೆ ಇನ್ನೂ ಚಾಲ್ತಿಯಲ್ಲಿದೆಯೇ; ಅಥವಾ ಸದರಿ ನಕ್ಸಲ್ ನಿಗ್ರಹ ಪಡೆಯನ್ನು ಮೊಟಕುಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ನಕ್ಸಲ್ ನಿಗ್ರಹಪಡೆಯು ಚಾಲ್ತಿಯಲ್ಲಿರುತ್ತದೆ. ಸಧ್ಯಕ್ಕೆ ಎಎನ್‌ಎಫ್ ಪಡೆಯನ್ನು ಮೊಟಕುಗೊಳಿಸಿರುವುದಿಲ್ಲ. |
| ಇ) | ಸದರಿ ಎ.ಎನ್.ಎಫ್. ಕಾರ್ಯಪಡೆಗೆ ಹೊಸ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಎಎನ್‌ಎಫ್ ಕಾರ್ಯಪಡೆಗೆ ಹೊಸ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಇರುವುದಿಲ್ಲ. |
| ಈ) | ಶರಣಾಗತರಾದ ನಕ್ಸಲರಿಗೆ ನೀಡುವ ಪ್ಯಾಕೇಜ್‌ಗಳ ವಿವರಗಳೇನು? ಮಾಹಿತಿ ಒದಗಿಸುವುದು) | ಕರ್ನಾಟಕ ರಾಜ್ಯದಲ್ಲಿ ಶರಣಾಗತರಾಗುವ ನಕ್ಸಲರಿಗೆ ಈವರೆಗೂ 2010, 2014, 2015 ಮತ್ತು 2024ನೇ ಸಾಲಿನಲ್ಲಿ ಒಟ್ಟು 04 ಸಂಖ್ಯೆಯ ನಕ್ಸಲ್ ಶರಣಾಗತಿ ಪಾಲಿಸಿಯನ್ನು ಶರಣಾಗತರಾಗಿ ಸಮಾಜದ ಮುಖ್ಯ ವಾಹಿನಿಗೆ ಬರುವ ನಕ್ಸಲರಿಗೆ ಶರಣಾಗತಿ ಮತ್ತು ಪುನರ್ವಸತಿ ಯೋಜನೆಯಡಿ ಪ್ರೋತ್ಸಾಹ ಧನ ಮಂಜೂರು ಮಾಡುವ ಬಗ್ಗೆ ಸರ್ಕಾರದ ಆದೇಶ ಹೊರಡಿಸಲಾತುತ್ತದೆ(ಪ್ರತಿ ಲಗತ್ತಿಸಿದೆ). |

ಸಂಖ್ಯೆ: ೯೮ ಎಸ್‌ಎಸ್‌ಟಿ ೨೦೨೫

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು